ANUBHAVS



# ಪರಲೋಕದಿಂದ ಪುನಃ ಇಹಲೋಕಕ್ಕೆ...

© Copyright 2010, Manasamarthyadata.com



*-ಉಮಂಗ್ ರಾಜೇಶ್ ಸರಯ್ಯ, ಮುಂಬಯಿ*

31ಡಿಸೆಂಬರ್ 2007ರ ವರ್ಷದ ಪೂರ್ವ ಸಂಧ್ಯೆಯ ಸಮಾರಂಭದಲ್ಲಿ ನಾವು ಕೆಲ ಮಿತ್ರರು ಸೇರಿ ಒಂದು ಪಾರ್ಟಿಯನ್ನು ಆಯೋಜಿಸಿದ್ದೆವು. ಪಾರ್ಟಿ ಹಾಲ್ ಖಾರ್‌ನ ಹ್ಯಾಪೀ ಹೋಮ್ (ಶ್ರೀ ಅನಿರುದ್ಧ ಗುರು ಕ್ಷೇತ್ರಂ)ನ ಹತ್ತಿರದಲ್ಲಿಯೇ ಇದ್ದಿತು. ಹ್ಯಾಪೀ ಹೋಮ್ ಅಂದರೆ, ನಮ್ಮ ಪರಮ ಪೂಜ್ಯ ಬಾಪೂರವರ ನಿವಾಸ ಸ್ಥಳ. ನಮಗೆ ಬಾಪೂ ಭಕ್ತರಿಗೆ ಶ್ರೀ ಅನಿರುದ್ಧ ಗುರುಕ್ಷೇತ್ರಂ ಎಂದರೆ ಈ ಸಂಸಾರದ ಸರ್ವೋಚ್ಚ ತೀರ್ಥ ಸ್ಥಳವೇ ಸರಿ. ಇಲ್ಲಿ ಬಾಪೂರವರು ಪರಮೇಶ್ವರ ದತ್ತಗುರುವಿನ ಪ್ರತಿಮೆ ಹಾಗೂ ಶ್ರೀಮದ್‌ಪುರುಷಾರ್ಥ ಪುರುಷೋತ್ತಮ ಯಂತ್ರದ ಸ್ಥಾಪನೆಯನ್ನು ಮಾಡಿದ್ದಾರೆ. ಆದುದರಿಂದ ನಾನು ನನ್ನ ಮಿತ್ರರಿಗೆ ‘‘ನಾವು ಹ್ಯಾಪೀ ಹೋಮ್‌ಗೆ ಹೋಗಿ  ಗುರು ಕ್ಷೇತ್ರಂಗೆ ಹೋಗಿ ದರ್ಶನ ಪಡೆದು ಹೊಸ ವರ್ಷದ ಶುಭಕಾಮನೆಗಳನ್ನು ಆಶೀರ್ವಾದ ರೂಪದಲ್ಲಿ ಪಡೆದುಕೊಳ್ಳುವಾ’’ ಎಂದು ಹೇಳಿದನು.

ಾನು ಹ್ಯಾಪೀ ಹೋಮ್‌ಗೆ ದರ್ಶನ ಪಡೆಯುವ ಸಲುವಾಗಿ ಹೋದೆನು. ಅಲ್ಲಿ ದಿನನಿತ್ಯದ ಪ್ರಕಾರ ರಾತ್ರಿಯ ಸಮಯದಲ್ಲಿ ‘ಶ್ರೀರಾಮರಸಾಯನ’ (ಪರಮ ಪೂಜ್ಯ ಬಾಪೂರವರು ಬರೆದ ಶ್ರೀರಾಮ ಚಂದ್ರರ ಚರಿತ್ರೆ. ಇದು ನಮಗೆ ಜೀವನದ ರಾಮಾಯಣವನ್ನು ಪರಿಚಯಿಸುತ್ತದೆ ಹಾಗೂ ನಮ್ಮನ್ನು ಶ್ರೀರಾಮನ ವಾನರ ಸೈನಿಕರನ್ನಾಗಿ ಮಾರ್ಪಡಿಸುತ್ತದೆ.) ಪಠಣೆಯು ನಡೆಯುತ್ತಿದ್ದಿತ್ತು. ರಾತ್ರಿ 11 .45 ರಿಂದ 12.00 ಘಂಟೆಯವರೆಗೆ ನಾನು ಅಲ್ಲಿ ಕುಳಿತು ಪ್ರಾರ್ಥನೆ ಮಾಡುತ್ತಿದ್ದೆನು ಹಾಗೂ ಮನಃ ಪೂರ್ವಕವಾಗಿ ನಾನು ಬಾಪೂರವರ ಆಶೀರ್ವಾದವನ್ನು ಬೇಡುತ್ತಿದ್ದೆನು. ನಂತರ ನಾನು ತಲೆಯೆತ್ತಿ ಮೇಲೆ ಏಳನೇ ಮಹಡಿಯತ್ತ ನೋಡಿದೆನು (ಏಳನೇ ಮಹಡಿಯಲ್ಲಿ ಬಾಪೂರವರ ವಾಸಸ್ಥಳವಿದೆ) ಆಗ ಅಲ್ಲಿ ಕಿಟಕಿಯಲ್ಲಿ ಸಾಕ್ಷಾತ್ ಬಾಪೂರವರನ್ನು ನೋಡಿ ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಬಾಪೂ ನನ್ನ ಕಡೆಗೇ ನೋಡಿ ನಸನಗುತ್ತಾ ನನ್ನನ್ನು ಆಶೀರ್ವದಿಸುತ್ತಿದ್ದರು. ನಂತರ ನಾನು ಹೊರಗೆ ಬಂದು ನನ್ನ ಶೂ ಧರಿಸಿದ ನಂತರ ಪುನಃ ಕತ್ತೆತ್ತಿ ಮೇಲೆ ನೋಡಿದೆನು ಆದರೆ, ಅಲ್ಲಿ ಯಾರೂ ಇರಲಿಲ್ಲ. (ನನಗೆ ನಂತರ ತಿಳಿಯಿತು ಆ ದಿನ

ಬಾಪೂ ಹ್ಯಾಪೀ ಹೋಮ್‌ನಲ್ಲಿ ಇದ್ದಿರಲೇ ಇಲ್ಲ. ಅವರು ಹೊರ ಊರಿಗೆ ಹೋಗಿದ್ದರು.) ಅಲ್ಲಿಂದ ಹೊರಟು ನಾನು ಪುನಃ ಪಾರ್ಟಿಯಲ್ಲಿ ಸಹಭಾಗಿಯಾದೆನು. ಸ್ವಲ್ಪ ಸಮಯದ ನಂತರ ನಾವು ನಮ್ಮ ಒಂದು ಮಿತ್ರನ ಕಾರಿನಲ್ಲಿ ಮನೆಗೆ ಹಿಂತಿರುಗಲು ಮುಂದಾದೆವು. ಆಗ ನಮ್ಮ ಮಿತ್ರ ನಮ್ಮನ್ನೆಲ್ಲಾ ತನ್ನ ಮನೆಗೆ ಬರಲು ಆಹ್ವಾನಿಸಿದನು. ಅದಕ್ಕೆ ನಾನು ನನ್ನ ಪಾಲಕರ ಅನುಮತಿ ಪಡೆದುಕೊಳ್ಳಬೇಕು ಎಂದು ಹೇಳಿದೆನು ಹಾಗೂ ನಾನು ಕೂಡಲೇ ನನ್ನ ಮೊಬೈಲ್‌ನಿಂದ ಫೋನ್ ಮಾಡಿ ತಂದೆಯನ್ನು ಕೇಳಿದೆನು. ಮೊದಮೊದಲು ಅವರು ನಿರಾಕರಿಸಿದರೂ ಕೂಡಾ ನಂತರ ನನ್ನ ಅಮ್ಮನ ಮಾತಿಗೆ ಮಣಿದು ರಾಜಿಯಾದರು.

ನಾವು ನಮ್ಮ ಮನೆಗೆ ತೆರಳುತ್ತಿದ್ದಾಗ ನಮ್ಮಲ್ಲಿ ಒಬ್ಬ ''ನಡೆಯಿರಿ, ನಾವು ಗಾಡಿಯಿಂದ ಮರೀನ್ ಲೈನ್ಸ್‌ನ ಸವಾರಿ ಮಾಡುವ'' ಎಂದನು. ನಾವು ಎಲ್ಲರೂ ಗಾಡಿಯಿಂದ ಮರೀನ್‌ಲೈನ್ಸ್ ತಲುಪಿದಾಗ ಇನ್ನೊಬ್ಬ ಮಿತ್ರ '' ನಾವು ಇನ್ನೊಮ್ಮೆ ನರೀಮನ್ ಪಾಯಿಂಟ್‌ಗೆ ಹೋಗಿ ಬರುವಾ'' ಎಂದನು. ಈತನ್ಮಧ್ಯೆ ನನಗೇಕೋ ಒಂದು ತರಾ ಮನಸ್ಸು ತಳಮಳಕ್ಕೊಳಗಾಯಿತು. ಅಷ್ಟರಲ್ಲಿ ನಾವು ಅರ್ಧ ರಸ್ತೆ ಕ್ರಮಿಸಿದ್ದೆವು. ಆಗ ನನಗೆ ಒಮ್ಮೆಲ್ಲೇ ಬಾಪೂ ''ಗಾಡಿ ಬಿಡುತ್ತಿರುವ ನಿನ್ನ ಮಿತ್ರನನ್ನು ಕೂಡಲೇ ಗಾಡಿ ನಿಲ್ಲಿಸಲು ಹೇಳು'' ಎಂದು ಹೇಳಿದಂತೆ ಭಾಸವಾಗತೊಡಗಿತು.

ನಾನು ಕೂಡಲೇ ನನ್ನ ಮಿತ್ರನಿಗೆ (ನಾನು ಎದುರುಗಡೆ ಡ್ರೈವಿಂಗ್ ಮಾಡುತ್ತಿದ್ದ ನನ್ನ ಮಿತ್ರನ ಪಕ್ಕದಲ್ಲಿ ಕುಳಿತ್ತಿದ್ದೆನು.) ''ನಿಲ್ಲಿಸು, ಏನಾದರೂ ದುರ್ಘಟನೆ ಆಗುವುದರಲ್ಲಿದೆ ಎಂದೆನಿಸುತ್ತಿದೆ'' ಎಂದು ಹೇಳಿದೆನು. ಆದರೆ, ಅವರ‍್ಯಾರೂ ನನ್ನ ಮಾತು ಕೇಳಿಸಿಕೊಳ್ಳಲೇ ಇಲ್ಲ..... ಆಗ ..... ಕೆಲವು ನಿಮಿಷಗಳಷ್ಟೇ ಸಂದಿರಬಹುದು ಆಕಸ್ಮತ್ತಾಗಿ ನನ್ನ ಮಿತ್ರ ಡ್ರೈವಿಂಗ್ ವ್ಹೀಲ್‌ನ ಮೇಲೆ

ANUBHAVS

HARI OM

© Copyright 2010, Manasamarthyadata.com

manasamarthyadata.com